ಸಂಯುಕ್ತ ಕರ್ನಾಟಕ



## ಹೊಸ ಮಾರ್ಗಕ್ಕೆ ಬಿಎಂಟಿಸಿ ಬಸ್

**ಬೆಂಗಳೂರು:** ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಯಶವಂತಪುರದಿಂದ ಕನಸವಾಡಿಗೆ ಹೊಸ ಮಾರ್ಗವನ್ನು ಪರಿಚಯಿಸಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಯಶವಂತಪುರ ಬಸ್ ನಿಲ್ದಾಣದಿಂದ ಜಾಲಹಳ್ಳಿ ಕ್ರಾಸ್, ಚಿಕ್ಕಬಾಣವಾರ, ಹೆಸರಘಟ್ಟ, ಟಿ.ಬಿ.ಕ್ರಾಸ್, ಕುಕ್ಕನಹಳ್ಳಿ, ಮಧುರೆ ಮಾರ್ಗವಾಗಿ ಕನಸವಾಡಿಗೆ ಮಾರ್ಗಸಂಖ್ಯೆ 253–ಸಿ ನ್ನು ಪರಿಚಯಿಸುತ್ತಿದ್ದು, ಸಾರ್ವಜನಿಕ ಪ್ರಯಾಣಿಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಕೋರಿದೆ.

## 'ಇ–ಆಸ್ತಿ ಖಾತಾ' ಕಡ್ಡಾಯ

**ಬೆಂಗಳೂರು:** ನಗರ ಸ್ಥಳೀಯ ಸಂಸ್ಥೆಗಳ ಸ್ಥಿರಾಸ್ತಿಗಳ ನೋಂದಣಿಗೆ ಇ–ಆಸ್ತಿ ಖಾತಾ ಕಡ್ಡಾಯವಾಗಿದ್ದು ಸೆ.9 ರಿಂದ ನೋಂದಣಿ ಪ್ರಾರಂಭವಾಗಲಿದೆ.

ಆದ್ದರಿಂದ ಸಾರ್ವಜನಿಕರು ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ವತ್ತುಗಳ ನೋಂದಣಿಗಾಗಿ ಇ–ಆಸ್ತಿ ಸಲ್ಲಿಸುವುದು ಕಡ್ಡಾಯವಾಗಿದೆ. ಇ–ಆಸ್ತಿ ತಂತ್ರಾಂಶದ ಮಾಹಿತಿ ಹೊರತು, ಬೇರೆ ಯಾವುದೇ ವಿಧಾನದಲ್ಲಿ ಸ್ಥಿರಾಸ್ತಿಗಳ ನೋಂದಣಿ ಮಾಡಿದ್ದಲ್ಲಿ ಕಾನೂನಿನಡಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಸದ್ಯ ಬಾಗಲಕೋಟೆ, ರಾಯಚೂರು, ಚಿತ್ರದುರ್ಗ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಚಾಲನೆ ನೀಡಲಾಗುತ್ತಿದೆ. ಇ–ಆಸ್ತಿ ಖಾತಾ ಇಲ್ಲದ ಸ್ವತ್ತುಗಳ ನೋಂದಣಿ ಸಾಧ್ಯವಿಲ್ಲ ಎಂದು ಸರಕಾರ ಪ್ರಕಟಣೆ ಮೂಲಕ ಹೇಳಿದೆ.

## 'ರಾಜ್ಯಪಾಲರು ಕನ್ನಡ ವಿರೋಧಿ'

**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಶಾಸಕ ಗಾಲಿ ಜನಾರ್ದನರೆಡ್ಡಿ ಅವರ ಭ್ರಷ್ಟಾಚಾರ ಕುರಿತ ದಾಖಲೆಗಳ ಕಡತವನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಿ ಸಲ್ಲಿಸುವಂತೆ ರಾಜ್ಯಪಾಲರು ಸರ್ಕಾರಕ್ಕೆ ಸೂಚಿಸಿರುವುದನ್ನು ಆಮ್ ಆದ್ಮಿ ಪಕ್ಷ ತೀವ್ರವಾಗಿ ಖಂಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಪಾಧ್ಯಕ್ಷ ಡಾ.ರಮೇಶ್ ಬೆಳ್ಳಂಕೊಂಡ ಕನ್ನಡದಲ್ಲಿರುವ ದಾಖಲೆಗಳ ಕಡತವನ್ನು ಇಂಗ್ಲಿಷ್‌ಗೆ ತರ್ಜುಮೆ ಮಾಡಿ ಸಲ್ಲಿಸುವಂತೆ ಹಿಂದಿರುಗಿಸಿರುವುದು ರಾಜ್ಯಪಾಲರು ಕನ್ನಡ ವಿರೋಧಿ ಧೋರಣೆಯನ್ನು ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

### ಇಂದು ಯೋಜನೆಗೆ ಸಿಎಂ ಚಾಲನೆ | ಬಯಲುಸೀಮೆ ಜಿಲ್ಲೆಗಳಿಗೆ ಜೀವಜಲ

# ಎತ್ತಿನಹೊಳೆ 7 ಜಿಲ್ಲೆಗಳಿಗೆ ಜೀವಸೆಲೆ

**ಬೆಂಗಳೂರು:** ಒಂದೇ ಒಂದು ನೀರಾವರಿ ಯೋಜನೆ ಇಡೀ ಪ್ರದೇಶದ ಜನರ ಜೀವನದ ಗುಣಮಟ್ಟವನ್ನೇ ಬದಲಿಸಿಬಿಡುತ್ತದೆ ಎಂಬುದಕ್ಕೆ ಕೆಆರ್‌ಎಸ್ ಜಲಾಶಯ ಉದಾಹರಣೆ. ಹಳೇ ಮೈಸೂರು ಪ್ರದೇಶದ ಅಭಿವೃದ್ಧಿಗೆ ಕೆಆರ್‌ಎಸ್ ಕಾರಣವಾಗಿದೆ. ಎತ್ತಿನಹೊಳೆ ಕೂಡ ಇದೇ ರೀತಿಯ ಯೋಜನೆ. ಈ ಯೋಜನೆ ಬಯಲುಸೀಮೆ ಜಿಲ್ಲೆಗಳ ಜನರ ಜೀವನ ಶೈಲಿಯನ್ನೇ ಬದಲಿಸಲಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.



ಬಯಲುಸೀಮೆ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ, ಬೆಂ.ಗ್ರಾಮಾಂತರ, ಹಾಸನಕ್ಕೆ ಕುಡಿಯುವ ನೀರು ಒದಗಿಸುವ ಹಾಗೂ ಕೆರೆಗಳನ್ನು ತುಂಬಿಸುವ ಎತ್ತಿನಹೊಳೆ ಮೊದಲ ಹಂತದ ಯೋಜನೆಗೆ ಚಾಲನೆ ನೀಡುತ್ತಿರುವ ಹಿನ್ನೆಲೆಯಲ್ಲಿ ಅವರು ಮಾಹಿತಿ ಹಂಚಿಕೊಂಡಿದ್ದಾರೆ. ಬಯಲುಸೀಮೆ ಎಂಬ ಹೆಸರು ಕೇಳಿದರೆ ಕಣ್ಮುಂದೆ ಬರಡು ಭೂಮಿ ಚಿತ್ರಣ ಬರುತ್ತದೆ. ಹಲವು ಸರ್ಕಾರ ಬಂದಾಗಲೂ ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಚರ್ಚೆ ಮಾತ್ರ ನಡೆಯುತ್ತಿತ್ತು. ಆದರೆ ಪರಿಹಾರ ಶೂನ್ಯ. ಬಯಲುಸೀಮೆ ಜಿಲ್ಲೆಗಳಿಗೆ ನೀರು ಒದಗಿಸುವುದು ಅನೇಕ ದಶಕಗಳ ಕನಸು ನನ್ನದು. ಕನಸು ನನಸಾಗಿಸಲು ಹಿಂದಿನ ಸರ್ಕಾರ ಯತ್ನಿಸಿದರೂ ಬದ್ಧತೆ ಕೊರತೆಯಿಂದ ನೆರವೇರಲಿಲ್ಲ. ಕಾಂಗ್ರೆಸ್ ಸರ್ಕಾರದ ಆಡಳಿತಾವಧಿಯಲ್ಲಿ ಬಯಲುಸೀಮೆಗೆ ನೀರಿನ ಸಿಂಚನವಾಗುತ್ತಿದೆ.

**ಜಲಸಮೃದ್ಧಿ ತರುವ ಗೌರಿ:** ಸ್ವರ್ಣಗೌರಿ ಮನೆಗೆ ಬರುತ್ತಾಳೆ ಎಂದರೆ ಸಮೃದ್ಧಿ ಮನೆಯಲ್ಲಿ ನೆಲೆಯಾಗುತ್ತದೆ. ಈ ಬಾರಿಯ ಗೌರಿ ಹಬ್ಬ ಜಲ ಸಮೃದ್ಧಿಯನ್ನು ಬಯಲು ಸೀಮೆಗೆ ತರುತ್ತಿದ್ದಾಳೆ. ಈ ಭಗೀರಥ ಕೆಲಸ ಮಾಡುವ ಅವಕಾಶ ಕಾಂಗ್ರೆಸ್ ಸರ್ಕಾರ, ಅದು ನನಗೆ ದೊರಕಿರುವುದು ಪುಣ್ಯ. ಒಂದು ಕಡೆ ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಜಧಾನಿ ಬೆಂಗಳೂರು. ಇದರ ಸುತ್ತಮುತ್ತ ನೀರಿಗೆ ಕಷ್ಟ ಪಡುವ ಜಿಲ್ಲೆಗಳು. ಈ ಸಮಸ್ಯೆ ನಿವಾರಿಸಲು ನಾನು ನೀರಾವರಿ ಕ್ಷೇತ್ರದ ಬಗ್ಗೆ ಹೆಚ್ಚು ಆಸಕ್ತಿ ವಹಿಸಿದೆ.

ಕೆಆರ್‌ಎಸ್‌ನಂತ ಒಂದು ಯೋಜನೆಯನ್ನು ಬಯಲುಸೀಮೆಗೆ ನೀಡಬೇಕು ಎನ್ನುವುದು ನನ್ನ ಬಹು ವರ್ಷಗಳ ಕನಸು. ಅದನ್ನು ಎತ್ತಿನಹೊಳೆಯ ಮೂಲಕ ನೆರವೇರಿಸಿದ್ದೇನೆ. ಎತ್ತಿನಹೊಳೆ ಯೋಜನೆಯ ಮೊದಲ ಹಂತದ ಯೋಜನೆಗೆ ಸೆ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಹೆಬ್ಬನಹಳ್ಳಿ ವಿತರಣಾ ತೊಟ್ಟಿ–4 ರಿಂದ 32 ಕಿ.ಮೀ. ದೂರದಲ್ಲಿ ಎಸ್ಕೇಪ್ ಚಾನೆಲ್‌ನಿಂದ ನಾಲೆಯ ಮೂಲಕ ವಾಣಿವಿಲಾಸ ಸಾಗರಕ್ಕೆ ನೀರು ಹರಿಯುತ್ತದೆ. ನ.1ರ ವೇಳೆಗೆ ಅಂದಾಜು 5 ಟಿಎಂಸಿ ನೀರು ಮೇಲಕ್ಕೆ ಎತ್ತಲಾಗುತ್ತದೆ.

### 23,251 ಕೋಟಿ ರೂ. ಯೋಜನೆ

ಎತ್ತಿನಹೊಳೆ ಯೋಜನೆಯಲ್ಲಿ ಒಟ್ಟು 24.01 ಟಿಎಂಸಿ ನೀರನ್ನು ಕುಡಿಯುವ ನೀರು ಹಾಗೂ ಕೆರೆಗಳನ್ನು ತುಂಬಿಸಲು ಬಳಸಿಕೊಳ್ಳಲಾಗುತ್ತದೆ. ಇದರಿಂದ ಬರ ಪೀಡಿತವಾದ 29 ತಾಲೂಕುಗಳ 6,657 ಗ್ರಾಮಗಳ 75.59 ಲಕ್ಷ ಜನರ ದಾಹ ತೀರಲಿದೆ. 5 ಜಿಲ್ಲೆಗಳ 527 ಕೆರೆಗಳ ಅಂತರ್ಜಲ ಮರುಪೂರಣ ನಡೆಯಲಿದೆ. ಯೋಜನೆಗೆ ರಾಜ್ಯ ಸರ್ಕಾರ 23,251 ಕೋಟಿ ರೂ. ವೆಚ್ಚ ಮಾಡುತ್ತಿದೆ. 2027ಕ್ಕೆ ಯೋಜನೆ ಕಾಮಗಾರಿ ಪೂರ್ಣಗೊಳಿಸುವುದು ಕಾಂಗ್ರೆಸ್ ಸರ್ಕಾರದ ಆದ್ಯತೆ.

## ಆಸ್ತಿ ತೆರಿಗೆ ಪಾವತಿ ಅವಧಿ ವಿಸ್ತರಣೆ

- ಪೆರಿಫೆರಲ್ ರಸ್ತೆಗೆ 27 ಸಾವಿರ ಕೋಟಿ
- ದೇವನಹಳ್ಳಿಯಲ್ಲಿ ನೂತನ ಕಾರಾಗೃಹ

**ಬೆಂಗಳೂರು :** ಬಿಬಿಎಂಪಿ ವ್ಯಾಪ್ತಿಯಲ್ಲಿನ ಬಾಕಿ ಆಸ್ತಿ ತೆರಿಗೆ ಪಾವತಿ( ಒನ್ ಟೈಂ ಸೆಟ್ಲಮೆಂಟ್) ಯೋಜನೆಯ ಅಂತಿಮ ದಿನಾಂಕವನ್ನು ನವೆಂಬರ್ 31ರವರೆಗೆ ವಿಸ್ತರಿಸಲು ರಾಜ್ಯ ಸಚಿವಸಂಪುಟ ಸಮ್ಮತಿಸಿದೆ. ಈ ಹಿಂದೆ ಸೆಪ್ಟಂಬರ್ 30ಕ್ಕೆ ಕೊನೆಯ ದಿನಾಂಕ ನಿಗದಿಯಾಗಿತ್ತು. ಇದಕ್ಕಾಗಿ ಬೃಹತ್ ಬೆಂಗಳೂರು ಮಹಗಾನಗರ ಪಾಲಿಕೆ ವಿಧೇಯಕ 2024ಕ್ಕೆ (ತಿದ್ದಪಡಿ)ಗೆ ಅನುಮೋದನೆ ಕೊಡಲು ಕ್ಯಾಬಿನೆಟ್ ಸಮ್ಮತಿಸಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ 600 ಕೈದಿಗಳ ಸಮರ್ಥ್ಯವುಳ್ಳ ನೂತನ ಕೇಂದ್ರ ಕಾರಾಗೃಹದ ವಸತಿಯೇತರ ಕಟ್ಟಡಗಳು ಮತ್ತು ರಸ್ತೆ ಕಾಮಗಾರಿಗೆ 100 ಕೋಟಿ ರೂಗಳ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ. ಬೆಂಗಳೂರಿ ನವೀಕರಿಸಬಹುದಾದ ಇಂಧನ ಪಾರ್ಕ್ ನಿಗಮ ನಿಯಮಿತ ಎಂಬ ಇಂಧನ ಪಾರ್ಕ್‌ಅನ್ನು ನಗರಾಭಿವೃದ್ಧಿ ಇಲಾಖೆಯ ವಿವಿಧ ಅಂಗಸಂಸ್ಥೆಗಳ ಸಹಭಾಗಿತ್ವದಲ್ಲಿ ಸ್ಥಾಪಿಸಲು ಸರ್ಕಾರ ಸಮ್ಮತಿಸಿದೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬೆಂಗಳೂರು ಪೆರಿಫೆರಲ್ ವರ್ತುಲ ರಸ್ತೆ ಯೋಜನೆ/ ಬ್ಯುಸಿನೆಸ್ ಕಾರಿಡಾರ್ ಯೋಜನೆ ಅನುಷ್ಠಾನಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಇದಕ್ಕೆ ವಿವಿಧ ಹಣಕಾಸು ಸಂಸ್ಥೆಗಳಿಂದ ಹಾಗೂ ಉದ್ಯಮಿಗಳಿಂದ ಬಂಡವಾಳ ಹೂಡಿಕೆ ಮತ್ತು ಸರ್ಕಾರದ ಗ್ಯಾರಂಟಿ ಅನ್ವಯ ಸಾಲ ಪಡೆಯಲು ನಿರ್ಧರಿಸಲಾಗಿದೆ. ಅಂದಾಜು 27 ಸಾವಿರ ಕೋಟಿ ರೂಗಳ ವೆಚ್ಚದ ಇದಾಗಿದೆ. ಇದಕ್ಕಾಗಿ ಶೇ75ರಷ್ಟು ಸಾಲ ಪಡೆಯಲು ಚಿಂತಿಸಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ್ ವಿವರಿಸಿದರು.

## ಪ್ರಜಾಪ್ರಭುತ್ವ ಉಳಿದರೆ ದೇಶದ ಅಭಿವೃದ್ಧಿ

**ಬೆಂಗಳೂರು:** ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಕೊಡುವ ಶಕ್ತಿಗಳನ್ನು ಮೆಟ್ಟಿ ನಾವು ನಿಲ್ಲಬೇಕು. ಪ್ರಜಾಪ್ರಭುತ್ವವಾದಿಗಳ ಹೋರಾಟ ಯಶಸ್ವಿಯಾಗಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಸೆ.15ರ ವಿಶ್ವ ಪ್ರಜಾಪ್ರಭುತ್ವ ದಿನದ ಅಂಗವಾಗಿ ಬೀದರ್‌ನಿಂದ ಚಾಮರಾಜನಗರದವರೆಗೂ 2500 ಕಿ.ಮೀ. ಉದ್ದದ ಮಾನವ ಸರಪಳಿ ಮತ್ತು ಪ್ರಜಾಪ್ರಭುತ್ವ ಸಂಭ್ರಮ ಆಚರಣೆ ಕುರಿತಂತೆ ವಿಧಾನಸೌಧದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಪ್ರಜಾಪ್ರಭುತ್ವ ನಾಶ ಮಾಡಲು ಯತ್ನಿಸುತ್ತಿರುವ ದುಷ್ಟಶಕ್ತಿಗಳು ಹೆಚ್ಚೇನು ಇಲ್ಲ. ಅವರು ಕಡಿಮೆ ಸಂಖ್ಯೆಯಲ್ಲಿದ್ದರೂ ಹೆಚ್ಚು ಚಟುವಟಿಕೆ ನಡೆಸುತ್ತಿದ್ದಾರೆ. ಪ್ರಜಾಪ್ರಭುತ್ವವಾದಿಗಳು ಹೆಚ್ಚು ಪ್ರಮಾಣದಲ್ಲಿದ್ದರೂ ಅವರು ಹೆಚ್ಚು ಕ್ರಿಯಾಶೀಲವಾಗಿಲ್ಲ. ಪ್ರಜಾಪ್ರಭುತ್ವ ನಾಶಕ್ಕೆ ಯತ್ನಿಸುತ್ತಿರುವವರನ್ನು ನಾವು ಮೆಟ್ಟಿ ನಿಲ್ಲೋಣ ಎಂದರು. ಬೀದರ್‌ನಿಂದ ಚಾಮರಾಜನಗರದವರೆಗೂ ನಡೆಯುತ್ತಿರುವ ಅಭೂತಪೂರ್ವ, ಐತಿಹಾಸಿಕ ಮಾನವ ಸರಪಳಿ ಚಳವಳಿಯನ್ನು ಯಶಸ್ವಿಗೊಳಿಸಬೇಕು. ನಾನು ವಿಧಾನಸೌಧದ ಎದುರು ಮಾನವ ಸರಪಳಿಯಲ್ಲಿ ಇರುತ್ತೇನೆ. ಎಲ್ಲರೂ ಭಾಗವಹಿಸಿ. ಪ್ರಜಾಪ್ರಭುತ್ವ, ಸಂವಿಧಾನ ಉಳಿದರೆ ಮಾತ್ರ ದೇಶದ ಅಭಿವೃದ್ಧಿ ಮತ್ತು ಸಾಮಾಜಿಕ ಬದಲಾವಣೆ ಸಾಧ್ಯ ಎಂದು ತಿಳಿಸಿದರು. ಸಚಿವರಾದ ಎಚ್.ಸಿ.ಮಹದೇವಪ್ಪ, ಮಧು ಬಂಗಾರಪ್ಪ, ರಹೀಂಖಾನ್, ಲಕ್ಷ್ಮಿ ಹೆಬ್ಬಾಳ್ಕರ್, ಸಿಎಂ ರಾಜಕೀಯ ಕಾರ್ಯದರ್ಶಿಗಳಾದ ಗೋವಿಂದರಾಜು, ನಸೀರ್ ಅಹಮದ್, ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಮತ್ತಿತರರಿದ್ದರು.




## ಸೈಬರ್ ವಂಚಕರಿಂದ ಲಕ್ಷ ರೂ.ವಂಚನೆ

**ಬೆಂಗಳೂರು:** ಸೈಬರ್ ವಂಚಕರು ಮಹಿಳೆಯಿಂದ ಲಕ್ಷಾಂತರ ರೂ.ಗಳನ್ನು ವಂಚಿಸಿದ್ದಾರೆ. ಶ್ರೀನಗರ ಸಮೀಪದ ಕಾಳಿದಾಸ ಲೇಔಟ್‌ನ ನಿಕಿತಾ ಸುಕ್ಕಾ ಎಂಬ ಮಹಿಳೆಗೆ ಫೇಸ್‌ಬುಕ್‌ನಲ್ಲಿ ವರ್ಕ್‌ಫ್ರಮ್ ಹೋಮ್ ಜಾಬ್‌ಗಾಗಿ ಹುಡುಕಾಟ ಮಾಡುತ್ತಿರುವಾಗ ಅವರ ಮೊಬೈಲ್‌ಗೆ ಒಂದು ಲಿಂಕ್ ಬಂದಿದ್ದು, ಆ ಲಿಂಕ್ ಮೇಲೆ ಕ್ಲಿಕ್ ಮಾಡಿದ ಕೂಡಲೇ ಅಪರಿಚಿತ ವ್ಯಕ್ತಿಯೊಬ್ಬ ಕರೆ ಮಾಡಿ ಟೆಲಿಗ್ರಾಂ ಡೌನ್‌ಲೋಡ್ ಮಾಡಿಕೊಂಡು ತಾವು ತಿಳಿಸುವ ಟಾಸ್ಕ್ ಮಾಡಿದರೆ ಅದಕ್ಕೆ ಪ್ರತಿಯಾಗಿ ಲಾಭವನ್ನು ನೀಡುವುದಾಗಿ ತಿಳಿಸಿದ್ದಾರೆ.

ಅದರಂತೆ ಮಹಿಳೆ ಟೆಲಿಗ್ರಾಂ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ಅಪರಿಚಿತರು ಹೇಳಿದಂತೆ ಹಂತ ಹಂತವಾಗಿ 4,31,881 ಹಣವನ್ನು ವರ್ಗಾವಣೆ ಮಾಡಿದ್ದು ನಂತರ ಮಹಿಳೆಗೆ ಯಾವುದೇ ಲಾಭವನ್ನು ನೀಡದೆ ಹೂಡಿಕೆ ಮಾಡಿದ್ದ ಹಣವನ್ನು ವಾಪಸ್ ನೀಡದೆ ಮೋಸ ಮಾಡಿದ್ದಾರೆ. ವಂಚನೆಗೊಳಗಾದ ಮಹಿಳೆ ಈ ಸಂಬಂಧ ದಕ್ಷಿಣ ವಿಭಾಗದ ಸಿಇಎನ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

### ಸಾರ್ವಜನಿಕ ಸೂಚನೆ

ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ, (ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರ್ಕಾರ ಮೂಲಕ ರಚಿಸಲಾಗಿದೆ), ಇವರು ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಚಿಕ್ಕಬೆಳ್ಳಂದೂರು ಗ್ರಾಮ, ಸರ್ವೆ ನಂ. 22/1(ಪಿ) & 22/3 ನಲ್ಲಿ ನಿರ್ಮಾಣ ವಾಗಲಿರುವ ಪ್ರಸ್ತಾವಿತ ವಸತಿ ಅಭಿವೃದ್ಧಿ ಮತ್ತು ಕ್ಲಬ್ ಹೌಸ್ ಯೋಜನೆಗೆ ಪರಿಸರಾತ್ಮಕ ಮಂಜೂರಾತಿಯನ್ನು ಗುರುತಿನ ಸಂಖ್ಯೆ: EC24C3801KA5579322N ಮತ್ತು ಕಡತ ಸಂಖ್ಯೆ: 21-94/2024-IA.III ದಿನಾಂಕ: 3ನೇ ಸೆಪ್ಟೆಂಬರ್ 2024ರಲ್ಲಿ ನೀಡಲಾಗಿದೆ.
ಕ್ಲಿಯರೆನ್ಸ್ ಪತ್ರಗಳು / ವಿವರಗಳ ಪ್ರತಿಗಳು ಪರಿಸರ ಪರಿಣಾಮ ಮೌಲ್ಯ ಮಾಪನ ಪ್ರಾಧಿಕಾರದ ವೆಬ್‌ಸೈಟ್ https://parivesh.nic.in/ನಲ್ಲಿ ಲಭ್ಯವಿದೆ.

ಮೆ. ಶೋಭಾ ಲಿಮಿಟೆಡ್
ಶೋಭಾ ಕಾರ್ಪೊರೇಟ್ ಕಛೇರಿ.
ಸರ್ಜಾಪುರ–ಮಾರತಹಳ್ಳಿ ಹೊರ ವರ್ತುಲ ರಸ್ತೆ, (ಒಆರ್‌ಆರ್), ದೇವರಬೀಸನಹಳ್ಳಿ, ಬೆಳ್ಳಂದೂರು ಪೋಸ್ಟ್, ಬೆಂಗಳೂರು–560103

### LOST OF DOCUMENTS

This is to inform the General Public that my client Sri. Amarnath Deva, Aged about 67 years, son of Dr.Gopala Krishna Murthy, residing at flat No.G4, Hall Mark Apartments, No.1, Wheelors Road, Frazer Town, Bengaluru – 560 005 do hereby inform you that, my client is the absolut owner of the property flat No.T6, BBMP Katha No. 68/2-3-23, Hari Sadan, 3 rd Floor, measuring 1448 Sq. Feet Super Built up Area and 447 sq. Feet UDS., constructed on (1) Site No.3, new no 121/B/68/2-1 BBMP no.68/2-3,Old HASB No.68/2, (2) Site No.4, New No. 120/1/68/1, HASB Katha No.68/1 of Vibhuthipura Village, K.R. Puram, Bengaluru East Taluk and now called as Malleshpalya Main Road, BBMP Ward No. 83, Bengaluru City and purchased the same under a Registered sale deed dated 19-09-2003 and my client has lost the aforesaid original Registered sale deed during transit/travelling on 27-12-2023.Inspite of his best efforts he could not trace the same and in this regard on 27.12.2023, he had lodged E-lost complaint at Bengaluru city, vide Lost report No. 086333.If anybody finds the original sale deed dated 19.09.2003 or is in possession, please handover the same to be above said address.
Bengaluru
Date: 05.09.2024

Sd/- K.S. Naga Reddy, Advocate
No.30, 5th Main, Gandhinagar,
Bengaluru -09, (M) 84969 34688

ಕಸ್ತೂರಿ
ಎಲ್ಲಾ ಅಂಗಡಿಗಳಲ್ಲಿ ಲಭ್ಯ!

ತುಂಬಿದ ಮನೆಗೊಂದು ಚಂದದ ಸಾಪ್ತಾಹಿಕ
ತಪ್ಪದೇ ಓದಿ
ಕರ್ಮವೀರ
ಎಲ್ಲ ಬುಕ್‌ಸ್ಟಾಲ್‌ಗಳಲ್ಲಿ ಲಭ್ಯ

### ನೈರುತ್ಯ ರೈಲ್ವೆ

ಮರು–ಟೆಂಡರ್ ಪ್ರಕಟಣೆ ಸಂಖ್ಯೆ:
02–ಎಕ್ಸ್‌ಇಎನ್–ಸಿಡಬ್ಲ್ಯೂಎಸ್–ಎಂವೈಎಸ್‌ಎಸ್–ಎಸ್‌ಪಿಎಲ್ 2024–25 ದಿನಾಂಕ 29.08.2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕೆಲಸದ ಹೆಸರು ಮತ್ತು ಸ್ಥಳ | ಅಂದಾಜು ಮೌಲ್ಯ |
|---|---|
| ಮೈಸೂರು ದಕ್ಷಿಣದ ಅಶೋಕಪುರಂ ವರ್ಕ್‌ಶಾಪ್‌ನಲ್ಲಿ ಈಗಾಗಲೇ ಇರುವ ಸಮುದಾಯ ಭವನವನ್ನು ಸುಧಾರಿತ ಸೌಲಭ್ಯಗಳೊಂದಿಗೆ ಮೇಲ್ದರ್ಜೆಗೇರಿಸುವ ಕೆಲಸ | ರೂ. 62,28,126.14 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.09.2024 ರಂದು 11.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಕಾರ್ಯನಿರ್ವಾಹಕ ಇಂಜಿನಿಯರ್, ಕೇಂದ್ರ ವರ್ಕ್‌ಶಾಪ್, ಮೈಸೂರು ದಕ್ಷಿಣ
ಪಿಯುಬಿ/387/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯು ಆರ್/2024-25
South Western Railway - SWR | SWRRLY | SWRRLY

### ನೈರುತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಇ–ಟೆಂಡರ್ ಪ್ರಕಟಣೆ ಸಂಖ್ಯೆ: ವೈ/ಇ.29/2024– 25/47 ದಿನಾಂಕ 28.08.2024

| ಕೆಲಸದ ವಿವರಣೆ | ಅಂದಾಜು ಮೌಲ್ಯ |
|---|---|
| ಒಂದು ವರ್ಷದ ಅವಧಿಗೆ ಮೈಸೂರು ಮತ್ತು ಅರಸೀಕೆರೆಯಲ್ಲಿನ ಪ್ರಾಥಮಿಕ ನಿರ್ವಹಣೆಯ ಕೋಚ್‌ಗಳ ನಾನ್–ಎಸಿಯಲ್ಲಿನ ರೈಲು ಲೈಟಿಂಗ್ ಡಿಪೋಗಳಲ್ಲಿ ಎಲೆಕ್ಟ್ರಿಕಲ್ ರೂಫ್ ಫಿಟ್ಟಿಂಗ್‌ಗಳು ಮತ್ತು ಬ್ಯಾಟರಿಗಳ ಸ್ವಚ್ಛತೆ. | ರೂ. 69,04,268.5 |

ಇ–ಟೆಂಡರ್ ಸೂಚನೆ ಸಂಖ್ಯೆ ವೈ/ಇ.29/2024– 25/48 ದಿನಾಂಕ 28.08.2024

| ಕೆಲಸದ ವಿವರಣೆ | ಅಂದಾಜು ಮೌಲ್ಯ |
|---|---|
| ಮೈಸೂರು ವಿಭಾಗ– ಮೈಸೂರು, ಅರಸೀಕೆರೆ, ಹಾಸನ, ಕಬಕ ಪುತ್ತೂರು, ಸುಬ್ರಹ್ಮಣ್ಯ, ಶಿವಮೊಗ್ಗ ಟೌನ್, ಸಕಲೇಶಪುರ ಹೊಳೆನರಸೀಪುರ, ಚಿಕ್ಕಜಾಜೂರು, ಶಿವನಿ ಮತ್ತು ಚಿತ್ರದುರ್ಗದಲ್ಲಿ ಟ್ರ್ಯಾಕ್ ಮೆಷಿನ್ ಸಿಬ್ಬಂದಿಗೆ ವಿಶ್ರಾಂತಿ ಕೊಠಡಿಗಳನ್ನು ಒದಗಿಸುವುದು–ವಿದ್ಯುತ್ ವ್ಯವಸ್ಥೆ. | ರೂ. 27,38,395 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18.09.2024 ರಂದು 11.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಜನರಲ್/ ಮೈಸೂರು
ಪಿಯುಬಿ/389/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯು ಆರ್/2024-25
South Western Railway - SWR | SWRRLY | SWRRLY

### ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ : ವೈ/ಇ.29/ 2024–25/50 ದಿನಾಂಕ 30.08.2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕೆಲಸದ ವಿವರಣೆ | ಅಂದಾಜು ಮೌಲ್ಯ |
|---|---|
| (ಮರು ಟೆಂಡರ್) ಎರಡು ವರ್ಷಗಳ ಅವಧಿಗೆ ಚಿಕ್ಕಜಾಜೂರು–ರಾಯದುರ್ಗ ವಿಭಾಗದಲ್ಲಿ ಒಎಚ್‌ಇ ಮತ್ತು ಪಿಎಸ್‌ಐ ಚಟುವಟಿಕೆಗಾಗಿ ಹೊರಗುತ್ತಿಗೆ. | ರೂ. 3,06,45,732.43 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.09.2024 ರಂದು 11.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್, ಮೈಸೂರು
ಪಿಯುಬಿ/392/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯು ಆರ್/2024-25
South Western Railway - SWR | SWRRLY | SWRRLY

### ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂಖ್ಯೆ : ವೈ/ಇ.29/ 2024–25/49 ದಿನಾಂಕ 30.08.2024
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳ ಸಹಿದಾರರು ಕೆಳಕಂಡ ಕೆಲಸಗಳಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

| ಕೆಲಸದ ವಿವರಣೆ | ಅಂದಾಜು ಮೌಲ್ಯ |
|---|---|
| (ಮರು ಟೆಂಡರ್) ಹಬ್ಬನ ಘಟ್ಟ ನಿಲ್ದಾಣದ ಕಾಲುವೆ ಕ್ರಾಸಿಂಗ್‌ನಲ್ಲಿ ಒಎಚ್‌ಇ ಮಾರ್ಪಾಡು | ರೂ. 24,32,547.06 |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20.09.2024 ರಂದು 11.00 ಗಂಟೆಗಳವರೆಗೆ
ಹೆಚ್ಚಿನ ಮಾಹಿತಿಗಳಿಗಾಗಿ: www.ireps.gov.in ಲಾಗಿನ್ ಮಾಡಿ
ಹಿರಿಯ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಟಿಆರ್, ಮೈಸೂರು
ಪಿಯುಬಿ/393/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯು ಆರ್/2024-25
South Western Railway - SWR | SWRRLY | SWRRLY

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು
ಜಾಹೀರಾತಿಗಾಗಿ ಸಂಪರ್ಕಿಸಿ : Mobile : 9008774228
E-mail : skadvtblr@gmail.com

### ಬಹಿರಂಗ ಹರಾಜು

ಮೆ. ಭವಾನಿ ಪಾನ್ ಬ್ರೋಕರ್, ಮಾದಪುರ, ಹಂಪಾಪುರ ಹೋಬಳಿ, ಹೆಚ್‌ಡಿ ಕೋಟೆ ತಾ॥ ಇವರಲ್ಲಿ 31–10–2022 ರಿಂದ 18–06–2023 ರವರೆಗೆ ಗಿರವಿ ಇಟ್ಟು ಬಿಡಿಸಿಕೊಳ್ಳದ ಪದಾರ್ಥಗಳನ್ನು ದಿನಾಂಕ 18–09–2024 ರಂದು ಬೆಳಿಗ್ಗೆ 11 ಗಂಟೆಗೆ ಈ ಮೇಲ್ಕಂಡ ವಿಳಾಸದಲ್ಲಿ ನರೇಶ್ ಕುಮಾರ್, ಗೌ. ಅಪ್ರೂವ್ಡ್ ಆಕ್ಷನೀಯರ್, ಕೆ–50, ಬನುಮಯ್ಯ ಚೌಕ, ಮೈಸೂರು–24. ಇವರು ಹರಾಜು ಮಾಡುವರು.

### ಬಹಿರಂಗ ಹರಾಜು

ಮೆ. ಮಧುರ್ ಮಿಲನ್ ಎಂಟರ್‌ಪ್ರೈಸಸ್, ನಂ. 316/9, 1ನೇ ಕ್ರಾಸ್, ಕಾಮಾಕ್ಷಿ ಪಾಳ್ಯ, ಮಾಗಡಿ ರಸ್ತೆ, ಬೆಂಗಳೂರು–560079 ಇವರಲ್ಲಿ ದಿ: 01–01–2017 ರಿಂದ 31–03–2023 ರವರೆಗೆ ಗಿರವಿ ಇಟ್ಟು ಬಿಡಿಸಿಕೊಳ್ಳದ ಪದಾರ್ಥಗಳನ್ನು ದಿನಾಂಕ 10–09–2024 ರಂದು ಬೆಳಿಗ್ಗೆ 10 ಗಂಟೆಗೆ ಈ ಮೇಲ್ಕಂಡ ವಿಳಾಸದಲ್ಲಿ ಶ್ರೀ ವಿಜಯ್‌ಕುಮಾರ್ ಜೈನ್ (ಸರ್ಕಾರದ ಅಧಿಕೃತ ಹರಾಜುದಾರರು), ನಂ. 1323, 6ನೇ ಮುಖ್ಯರಸ್ತೆ, ಕೆ.ಎನ್. ಬಡಾವಣೆ, ಯಶವಂತಪುರ, ಬೆಂಗಳೂರು–560022 ಇವರು ಹರಾಜು ಮಾಡುವರು. ಹೆಚ್ಚಿನ ವಿವರಗಳಿಗಾಗಿ ಗಿರವಿದಾರರನ್ನು ಸಂಪರ್ಕಿಸಿ.

### ಬಹಿರಂಗ ಹರಾಜು

ಮೆ. ವಿನಯ್ ಬ್ಯಾಂಕರ್ಸ್, ಪಾನ್ ಬ್ರೋಕರ್ಸ್, ನಂ. 137, ಪ್ರಕಾಶ್ ಸ್ಟೋರ್, ಎಸ್.ವಿ. ರೋಡ್, (ಹಳೆ ಮದ್ರಾಸ್ ರಸ್ತೆ), ಹಲಸೂರು, ಬೆಂಗಳೂರು–560008 ಗಿರವಿ ಅಂಗಡಿಯಲ್ಲಿ ತಾ: 12/04/2023 ರಿಂದ 18/08/2023ರ ಅವಧಿಯಲ್ಲಿ ಗಿರವಿ ಇಟ್ಟು, ವಾಯಿದೆ ಮೀರಿದ್ದರು ಸಹ ಬಿಡಿಸದೆ ಇರುವ ವಸ್ತುಗಳನ್ನು (ಸೂಚನೆ-ಕರ್ನಾಟಕ ಋಣ ಪರಿಹಾರ ಕಾಯ್ದೆಯಡಿಯಲ್ಲಿ ಬರುವ ವಸ್ತುಗಳನ್ನು ಹೊರತುಪಡಿಸಿ) ಕೆ.ಪಿ.ಬಿ ಆಕ್ಟ್ 20(1)ನೇ ಪ್ರಕಾರ ಬಹಿರಂಗ ಹರಾಜು ಮೂಲಕ ತಾ: 12/09/2024 ರಂದು ಬೆಳಗ್ಗೆ 10:00 ಗಂಟೆಗೆ ಮೇಲ್ಕಂಡ ಗಿರವಿದಾರರ ವಿಳಾಸದಲ್ಲಿ ಶ್ರೀ ಬಿ. ಪ್ರಕಾಶ್ (ಸರ್ಕಾರಿ ಮಾನ್ಯತೆ ಪಡೆದ ಹರಾಜುದಾರರು) ನಂ. 43, ಸೆಪ್ಪಿಂಗ್ಸ್ ರೋಡ್, ಬೆಂಗಳೂರು–560001, ಇವರು ಹರಾಜು ಮಾಡುವರು. ಹೆಚ್ಚಿನ ವಿವರಗಳಿಗಾಗಿ ಗಿರವಿದಾರರನ್ನು ಸಂಪರ್ಕಿಸಿ. (ಹರಾಜಿನಲ್ಲಿ ಭಾಗವಹಿಸುವವರು ದಯಮಾಡಿ ಸಾಮಾಜಿಕ ಅಂತರ ಮತ್ತು ಮಾಸ್ಕ್ ಧರಿಸಬೇಕಾಗಿ ವಿನಂತಿ)

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ, ಅವುಗಳಲ್ಲಿನ ಮಾಹಿತಿ, ವಸ್ತುಲೋಪ– ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

## ವೀರಶೈವ ಮಹಾಸಭೆ ಚುನಾವಣೆ ಶಾಮನೂರು ನಾಮಪತ್ರ ಸಲ್ಲಿಕೆ



ಸದಾಶಿವನಗರದಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ವೀರಶೈವ–ಲಿಂಗಾಯತ ಭವನದಲ್ಲಿ ಶಾಸಕ, ಹಾಲಿ ರಾಷ್ಟ್ರೀಯ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ಮಹಾಸಭೆ ಅಧ್ಯಕ್ಷರ ಆಯ್ಕೆಗಾಗಿ ಅರ್ಜಿ ಸಲ್ಲಿಸಿದರು.

**ಬೆಂಗಳೂರು:** ಸದಾಶಿವನಗರದಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭೆಯ ವೀರಶೈವ– ಲಿಂಗಾಯತ ಭವನದಲ್ಲಿ ಶಾಸಕ, ಹಾಲಿ ರಾಷ್ಟ್ರೀಯ ಅಧ್ಯಕ್ಷ ಡಾ.ಶಾಮನೂರು ಶಿವಶಂಕರಪ್ಪ ಗುರುವಾರ ಮಹಾಸಭೆ ಅಧ್ಯಕ್ಷರ ಆಯ್ಕೆಗಾಗಿ ಅರ್ಜಿ ಸಲ್ಲಿಸಿದರು.

ಮಹಾಸಭೆಯ ಮುಖ್ಯ ಚುನಾವಣಾಧಿಕಾರಿ ಎಂ.ಬಿ.ದ್ಯಾಬೇರಿ ನಾಮಪತ್ರ ಸ್ವೀಕರಿಸಿದರು. ನಾಮಪತ್ರ ಸಲ್ಲಿಸಲು ಸೆ.11 ಕೊನೆ ದಿನ, ಸೆ.12ಕ್ಕೆ ನಾಮಪತ್ರ ಪರಿಶೀಲನೆ ನಡೆಯಲಿದ್ದು, ಸೆ.19ಕ್ಕೆ ಹಿಂಪಡೆಯಲು ಅವಕಾಶವಿದೆ. ಅಗತ್ಯವಿದ್ದಲ್ಲಿ ಸೆ.29ಕ್ಕೆ ಚುನಾವಣೆ ನಡೆಯಲಿದೆ. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಘಟಕದ ನೂತನ ಅಧ್ಯಕ್ಷ ಶಂಕರ ಬಿದರಿ, ಚುನಾಯಿತ ಮಹಾಸಭೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ಎ.ಎಸ್.ವೀರಣ್ಣ, ಎಂ.ಎನ್.ರಾಜಶೇಖರಪ್ಪ (ಅಣಬೇರು ರಾಜಣ್ಣ), ಬಿ.ಎಸ್.ಸಚ್ಚಿದಾನಂದಮೂರ್ತಿ, ಎಚ್.ಎಂ.ರೇಣುಕ ಪ್ರಸನ್ನ, ಚಿದಾನಂದ ಎಸ್.ಮಠದ, ಕೋರಿ ವಿರುಪಾಕ್ಷಪ್ಪ, ಗಂಗಮ್ಮ ಬಸವರಾಜು, ಚಂದ್ರಕಲ ಶ್ರೀಕಂಠರಾಧ್ಯ, ರೂಪಶೇಖರ ಮತ್ತು ಇನ್ನಿತರೇ ಸಮಿತಿ ಸದಸ್ಯರು ಸೂಚಕರು ಮತ್ತು ಅನುಮೋದಕರಾಗಿ ಉಪಸ್ಥಿತರಿದ್ದರು.

**ಪುನರಾಯ್ಕೆ ಸಂಭವವೇ ಹೆಚ್ಚು**

ಶಾಸಕ ಶಾಮನೂರು ಶಿವಶಂಕರಪ್ಪ ಅವರು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಪುನರಾಯ್ಕೆಯಾಗುವ ಸಂಭವ ಹೆಚ್ಚಿದೆ. ಇವರನ್ನು ಹೊರತುಪಡಿಸಿ ಯಾರು ಕೂಡ ನಾಮಪತ್ರ ಸಲ್ಲಿಸದ ಹೋದರೆ ಶಿವಶಂಕರಪ್ಪವರೇ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ.

## ಸಿಂಡಿಕೇಟ್ ನಾಮನಿರ್ದೇಶಿತ ಸದಸ್ಯರಿಗೆ ಹೈಕೋರ್ಟ್ ತಾಕೀತು

**ಬೆಂಗಳೂರು:** ಬೆಂ.ವಿವಿ, ಬೆಂ.ನಗರ ವಿವಿ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳಿಗೆ ಸರ್ಕಾರ ಇತ್ತೀಚೆಗೆ ನಾಮನಿರ್ದೇಶನ ಮಾಡಿದ ಸಿಂಡಿಕೇಟ್ ಸದಸ್ಯರಿಗೆ ಕಾರ್ಯನಿರ್ವಹಣೆ ಮಾಡದಂತೆ ಹಾಗೂ ಸಭೆಯಲ್ಲಿ ಪಾಲ್ಗೊಳ್ಳದಂತೆ ಹೈಕೋರ್ಟ್ ಸೂಚಿಸಿದೆ.

ಈ ಮೂರು ವಿವಿಗಳಿಗೆ ಉನ್ನತ ಶಿಕ್ಷಣ ಇಲಾಖೆ ಆ.27ರಂದು 9 ಮಂದಿ ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಶಿಕ್ಷಣ ತಜ್ಞ ಡಾ.ಪಿ.ಬಿ.ಜಯಕೃಷ್ಣ, ಕೆ.ರಾಮಮೂರ್ತಿ, ಆರ್‌ಎಸ್‌ಎನ್ ಪ್ರಸಾದ್ ಹಾಗೂ ಡಾ.ಎಂ. ಚಿಕ್ಕಮುನಿಯಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾ. ಹೇಮಂತ್ ಚಂದನಗೌಡರ್ ಅವರಿದ್ದ ಪೀಠ, ನಾಮನಿರ್ದೇಶಿತ ಸಿಂಡಿಕೇಟ್ ಸದಸ್ಯರು ತಮ್ಮ ಸ್ಥಾನದಲ್ಲಿ ಕಾರ್ಯನಿರ್ವಹಣೆ ಮಾಡದಂತೆ ಹಿಂದಿನ ವಿಚಾರಣೆ ವೇಳೆ ಸೂಚಿಸಲಾಗಿತ್ತು. ಆದರೆ, ಇತ್ತೀಚೆಗೆ ನಡೆದ ಬೆಂಗಳೂರು ಉತ್ತರ ವಿವಿಯ ಘಟಿಕೋತ್ಸವದಲ್ಲಿ ನಾಮನಿರ್ದೇಶಿತ ಸಿಂಡಿಕೇಟ್ ಸದಸ್ಯರು ಭಾಗವಹಿಸಿದ್ದಾರೆಂದು ಅರ್ಜಿದಾರರ ಪರ ವಕೀಲರು ನ್ಯಾಯಪೀಠದ ಗಮನಕ್ಕೆ ತಂದರು. ನ್ಯಾಯಾಲಯದ ಸೂಚನೆಯಿದ್ದರೂ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲವೆಂದು ಪೀಠ ಎಚ್ಚರಿಕೆ ನೀಡಿದೆ.

ಅಲ್ಲದೆ ನ್ಯಾಯಪೀಠ, ಸಿಂಡಿಕೇಟ್ ಸದಸ್ಯರಿಗೆ ಆ ಸ್ಥಾನದಲ್ಲಿ ಕಾರ್ಯ ನಿರ್ವಹಿಸದಂತೆ ಸೂಚನೆ ನೀಡುವಂತೆ ಸರ್ಕಾರದ ಪರ ವಕೀಲರಿಗೆ ಮೌಖಿಕವಾಗಿ ಸೂಚಿಸಿದೆ. ಈ ವೇಳೆ ಸರ್ಕಾರದ ಪರ ವಕೀಲರು, ಅರ್ಜಿಗಳಿಗೆ ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ಕೋರಿದರಲ್ಲದೇ, ಪ್ರತಿವಾದಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ಪರಿಣಿತರಾಗಿದ್ದು, ಅವರ ನಾಮನಿರ್ದೇಶನ ಪ್ರಕ್ರಿಯೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು ಎಂದು ಕೋರಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಸರ್ಕಾರ ಹಾಗೂ ನಾಮನಿರ್ದೇಶಿತ ಸಿಂಡಿಕೇಟ್ ಸದಸ್ಯರು ಸೇರಿದಂತೆ ಅರ್ಜಿಯಲ್ಲಿನ ಎಲ್ಲ ಪ್ರತಿವಾದಿಗಳು ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬೇಕೆಂದು ಸೂಚಿಸಿ ವಿಚಾರಣೆ ಮುಂದೂಡಿದೆ.

## ಸ್ತನ ಕ್ಯಾನ್ಸರ್ ಜಾಗೃತಿಗೆ 'ಪಿಂಕ್ ಪವರ್ ರನ್'

**ಬೆಂಗಳೂರು:** ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವ ಮಹತ್ವಾಕಾಂಕ್ಷೆಯೊಂದಿಗೆ ಸುಧಾರೆಡ್ಡಿ ಫೌಂಡೇಶನ್ ಮತ್ತು ಮೆಘಾ ಎಂಜಿನಿಯರಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ (ಎಂಇಐಎಲ್) ಫೌಂಡೇಶನ್ ಸೆ.29ಕ್ಕೆ ಬೃಹತ್ ಪ್ರಮಾಣದ 'ಪಿಂಕ್ ಪವರ್ ರನ್' ಏರ್ಪಡಿಸಿದ್ದು ಆ ಮೂಲಕ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸುವ ಗುರಿಹೊಂದಿದೆ ಎಂದು ಸುಧಾರೆಡ್ಡಿ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷೆ ಸುಧಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ 'ಪಿಂಕ್ ಪವರ್ ರನ್ ಮೂರು ವಿಭಿನ್ನ ವಿಭಾಗಗಳನ್ನು ಒಳಗೊಂಡಿ ರುತ್ತದೆ–3 ಕಿ.ಮೀ, 5 ಕಿ.ಮೀ ಮತ್ತು 10 ಕಿ.ಮೀ ಓಟದಲ್ಲಿ ವಿವಿಧ ವಯಸ್ಸಿನವರು ಭಾಗವಹಿಸಬಹುದಾಗಿದೆ ಎಂದರು. ಈ ಬೃಹತ್ ಓಟ ಮತ್ತು ಗುಲಾಬಿ ಪಕ್ಷಿ ಸೃಷ್ಟಿ ಮೂಲಕ ಗಿನ್ನಿಸ್ ವಿಶ್ವ ದಾಖಲೆ ನಿರ್ಮಿಸುವ ಉದ್ದೇಶ ಹೊಂದಲಾಗಿದ್ದು, ಇದರಿಂದ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಗುವುದು. ತಮ್ಮ ಈ ಪ್ರಯತ್ನದಲ್ಲಿ ಪಾಲ್ಗೊಳ್ಳಲಿರುವ ಹಿರಿಯ– ಕಿರಿಯರು ಸಂಪೂರ್ಣವಾಗಿ ಗುಲಾಬಿ ಬಣ್ಣದಲ್ಲಿ ಅಲಂಕರಿಸಲಾದ ಪಕ್ಷಿಯ ಬೃಹತ್ ಮಾನವ ಚಿತ್ರವನ್ನು ರಚಿಸುವ ಮೂಲಕ ಇಡೀ ಜಗತ್ತಿಗೆ ಸ್ತನ ಕ್ಯಾನ್ಸರ್ ವಿರುದ್ಧದ ಹೋರಾಟದಲ್ಲಿನ ಐಕ್ಯತೆ ಪ್ರದರ್ಶಿಸಲಾಗುವುದು ಎಂದರು.

www.pinkpowerrun.in ವೆಬ್‌ಸೈಟ್‌ಗೆ ಸಂಪರ್ಕಿಸಬಹುದು.




## ಇಂದಿನ ಕಾರ್ಯಕ್ರಮ



06–09–2024 | ಶುಕ್ರವಾರ

**ಸಂಜೆ: ಶ್ರೀ ಜ್ಞಾನಗಣಪತಿ ದೇವಸ್ಥಾನ ಟ್ರಸ್ಟ್,** ಶ್ರೀ ಜ್ಞಾನಗಣಪತಿ ಕಲಾವೃಂದ ಸಂಯುಕ್ತಾಶ್ರಯದಲ್ಲಿ 20ನೇ ವರ್ಷದ ಗಣೇಶೋತ್ಸವ. ವೀರಶೈವ ಲಿಂಗಾಯತ ಸಾಂಸ್ಕೃತಿಕ ವೇದಿಕೆಯಿಂದ ವಚನ ಗಾಯನ. 5.00, ಪ್ರಾರ್ಥನ, ಚೈತನ್ಯ, ಲಭ್ಯ ಅವರಿಂದ ಭರತನಾಟ್ಯ. 5.30, ಶುಭ ಸಂಗೀತ ನೃತ್ಯ ಕಲಾವಿದರಿಂದ ಭಕ್ತಿಗೀತೆ, ಸಂಗೀತ. 6.30 'ಗಣೇಶ್ ವೈಭವ' ಕುರಿತು ಹರಿಕಥೆ. ನಿರ್ದೇಶನ: ವಿಶ್ವನಾಥ್ ಮಂಡಿ, ರೇಖಾ ಮಂಡಿ. ಸ್ಥಳ: ಮರಿಯಪ್ಪನ ಪಾಳ್ಯ, ಜ್ಞಾನಭಾರತಿ 2ನೇ ವಿಭಾಗ, ಶ್ರೀ ಜ್ಞಾನಗಣಪತಿ ಮಾರ್ಗ, ಶ್ರೀ ಜ್ಞಾನಗಣಪತಿ ದೇವಸ್ಥಾನ ಟ್ರಸ್ಟ್. 7.00

**ಶ್ರೀ ರಾಘವೇಂದ್ರ ಸೇವಾ ಸಮಿತಿ,** 'ಪ್ರೋಷ್ಠಪದೀ ಭಾಗವತ' ವಿಷಯ ಕುರಿತು ಕೃಷ್ಣಾಚಾರ ಕೆಂಪದಾಳಿಹಳ್ಳಿ ಅವರಿಂದ ಧಾರ್ಮಿಕ ಪ್ರವಚನ. ಸ್ಥಳ: ಸುಧೀಂದ್ರನಗರ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠ. 7.00

**ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರ,** ಶಾಂತಾ ಗಾಂಧಿ ವಿರಚಿತ 'ಜಸ್ಮಾ ಓಡನ್' ನಾಟಕ ಪ್ರದರ್ಶನ. ನಿರ್ದೇಶನ: ಡಾ.ಬಿ.ಜಯಶ್ರೀ, ಕನ್ನಡ ಅನುವಾದ: ವೈಶಾಲಿ ಕಾಸರವಳ್ಳಿ. ಸ್ಥಳ: ಮಲ್ಲತ್ತಹಳ್ಳಿ, ಕಲಾಗ್ರಾಮ. ಸಮುಚ್ಛಯ ಭವನ. 7.00

ADITYA BIRLA CAPITAL
ರಕ್ಷಣೆ | ಹೂಡಿಕೆ | ಹಣಕಾಸು | ಸಲಹೆ
ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್

ನೋಂದಾಯಿತ ಕಚೇರಿ : ಇಂಡಿಯನ್ ರೇಯಾನ್ ಕಾಂಪೌಂಡ್, ವೆರಾವಲ್, ಗುಜರಾತ್ - ೩೬೨೨೬೬
ಶಾಖೆಯ ವಿಳಾಸ : ಸಂಖ್ಯೆ 01/78, ಸ್ಟಾರ್ ಅವೆನ್ಯೂ, 6ನೇ ಕ್ರಾಸ್, ವಿಕ್ಟೋರಿಯಾ ರಸ್ತೆ, ವಿಕ್ಟೋರಿಯಾ ಲೇಔಟ್, ಬೆಂಗಳೂರು, ಕರ್ನಾಟಕ - 560047

"ಅನುಬಂಧ - IV-A" [ನಿಯಮ ೮ (೬) ರ ನಿಬಂಧನೆಯನ್ನು ನೋಡಿ]
ಸ್ಥಿರ ಆಸ್ತಿಯ ಮಾರಾಟದ ಮಾರಾಟ ಸೂಚನೆ

ಆರ್ಥಿಕ ಆಸ್ತಿಗಳ ಭದ್ರತೆ ಮತ್ತು ಪುನರ್‌ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ ೨೦೦೨ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು ೨೦೦೨ ರ ನಿಯಮ ೮ (೬) ರ ನಿಯಮ ೯(1) ರೊಂದಿಗೆ ಓದಿಕೊಂಡಂತೆ ನಿಯಮ ೮ (೬)ರ ನಿಬಂಧನೆ ಅಡಿಯಲ್ಲಿ ಸ್ಥಿರ ಆಸ್ತಿಯ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ಸೂಚನೆ.
ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು) ಮತ್ತು ಜಾಮೀನುದಾರ(ರು)ರಿಗೆ ಸೂಚನೆ ನೀಡುವುದೇನೆಂದರೆ, ಕೆಳಗೆ ವಿವರಿಸಿದ ಸ್ಥಿರ ಆಸ್ತಿಯನ್ನು ಭದ್ರತಾ ಸಾಲಗಾರನಿಗೆ ಅಡಮಾನವಿಡಲಾಗಿದ್ದು, ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್ ಭದ್ರತಾ ಸಾಲಗಾರ ಅವರ ಅಧಿಕೃತ ಅಧಿಕಾರಿ ದಿನಾಂಕ 15.04.2024ರಂದು ಈ ಕೆಳಗಿನ ಮೊತ್ತ ವಸೂಲಿಗಾಗಿ ಭೌತಿಕ ಸ್ವಾಧೀನವನ್ನು ತೆಗೆದುಕೊಂಡಿದ್ದಾರೆ. ಸಾಲಗಾರರು/ಸಹ–ಸಾಲಗಾರರು/ಜಾಮೀನುದಾರರು ಶ್ರೀ ವಿ. ಜಿ. ಪ್ರಣವ್, ಶ್ರೀ ವೇಣುಗೋಪಾಲ್ ಗಂಗಾಧರನ್ ಪ್ರಣವ್, ಶ್ರೀಮತಿ ಹರೀಶ್ ಸಿಂಧು ಅವರಿಂದ ರೂ. 68,70,232.34/- (ರೂಪಾಯು ಅರವತ್ತೆಂಟು ಲಕ್ಷ ಎಪ್ಪತ್ತು ಸಾವಿರ ಎರಡು ನೂರಾ ಮೂವತ್ತೆರಡು ಮತ್ತು ಮೂವತ್ನಾಲ್ಕು ಪೈಸೆ ಮಾತ್ರ) 16.08.2024 ರಂತೆ ಪಾವತಿ ದಿನಾಂಕದವರೆಗೆ ಹೆಚ್ಚಿನ ಬಡ್ಡಿ ಮತ್ತು ಇತರ ವೆಚ್ಚಗಳು ಸೇರಿ ವಸೂಲಿಗಾಗಿ "ಎಲ್ಲದೆಯೋ ಹಾಗೇ" "ಏನಿದೆಯೋ ಹಾಗೇ" ಮತ್ತು "ಹೇಗಿದೆಯೋ ಹಾಗೇ" ಆಧಾರದ ಮೇಲೆ ದಿನಾಂಕ 07ನೇ ಅಕ್ಟೋಬರ್ 2024 ರಂದು ಮಾರಾಟ ಮಾಡಲಾಗುತ್ತದೆ. ಮೀಸಲು ಬೆಲೆ ಮತ್ತು ಮುಂಗಡ ಠೇವಣಿ ಹಣ ಈ ಕೆಳಗಿನಂತಿರುತ್ತದೆ :

| ಸ್ಥಿರ ಆಸ್ತಿಯ ವಿವರಣೆ | ಮೀಸಲು ಬೆಲೆ | ಮುಂಗಡ ಠೇವಣಿ ಹಣ |
|---|---|---|
| ಸ್ವತ್ತಿನ ಎಲ್ಲ ಭಾಗ–ವಿಭಾಗ ಸೇರಿ ಆಸ್ತಿ ಹೊಂದಿರುವ ಫ್ಲಾಟ್ ನಂ.202 ಮತು 203, ಹೊಸ ನಂ.202/3, ಮೊದಲ ಮಹಡಿ, 548 ಚದರ ಅಡಿ ಸೂಪರ್ ಬಿಲ್ಟ್ ಅಪ್ ಏರಿಯಾ ಜೊತೆಗೆ 153 ಚದರ ಅಡಿ ಅವಿಭಜಿತ ಷೇರು ಮತ್ತು 1008 ಚದರ ಅಡಿ ಸೂಪರ್ ಬಿಲ್ಟ್ ಅಪ್ ಏರಿಯಾ ಜೊತೆಗೆ 281 ಅವಿಭಜಿತ ಹಂಚಿಕೆಯ ಚದರ ಅಡಿ, ಒಂದು ಕಾರ್ ಪಾರ್ಕಿಂಗ್ ಸ್ಥಳ, "ಎಸ್‌ಎಲ್‌ವಿ ಪ್ಯಾರಡೈಸ್" ಕಟ್ಟಡ ಸಂಯೋಜಿಸಿದ ಬಿಬಿಎಂಪಿ ಖಾತಾ ನಂ. 24/41/1, ಸರ್ವೆ ನಂ.44/1, ಸಂಖ್ಯೆ ALN(E)SR(KR.HO) 124 ಮತ್ತು 125/2012–13 ದಿನಾಂಕ 15.01.2013 ರಂದು ಪರಿವರ್ತಿತವಾಗಿದೆ, ಕ್ಯಾಲಸನಹಳ್ಳಿ ಗ್ರಾಮ, ಕೆ. ಆರ್. ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೂಕು, ಬೆಂಗಳೂರು, ಈಗ ಬಿಬಿಎಂಪಿ ಮಿತಿಯಲ್ಲಿದೆ. ಚಕಬಂದಿ : ಪೂರ್ವ : ರಸ್ತೆ ಮತ್ತು ಖಾಸಗಿ ಆಸ್ತಿ ; ಪಶ್ಚಿಮ : ಸರ್ವೆ ನಂ.44/1; ಉತ್ತರ : ರಸ್ತೆ ಮತ್ತು ಖಾಸಗಿ ಆಸ್ತಿ; ದಕ್ಷಿಣ : ಸರ್ವೇ ನಂ. 39. | ರೂ. 85,02,301/- | ರೂ. 8,50,230/- |

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಭದ್ರತಾ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ನೋಡಿ ಅಂದರೆ https://mortgagefinance.adityabirlacapital.com/Pages/Individual/Properties-for-Auction-under-SARFAESI-Act.aspx https://sarfaesi.auctiontiger.net ನ ವೆಬ್‌ಸೈಟ್‌ನಲ್ಲಿ ನೋಡಿ.
ದಿನಾಂಕ : 04.09.2024
ಸ್ಥಳ : ಬೆಂಗಳೂರು
LAN: ABBANLAP000000510613
ಸಹಿ/- ಅಧಿಕೃತ ಅಧಿಕಾರಿ
ಆದಿತ್ಯ ಬಿರ್ಲಾ ಫೈನಾನ್ಸ್ ಲಿಮಿಟೆಡ್‌ಗಾಗಿ
(9686701466)

## ಪ್ರೇಯಸಿಗಾಗಿ ಕಳ್ಳತನ–ಬಂಧನ

**ಬೆಂಗಳೂರು:** ಪ್ರೇಯಸಿಯನ್ನು ತೃಪ್ತಿಪಡಿಸಲು ಮನೆ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಜಿಗಣಿ ಪೊಲೀಸರು ಬಂಧಿಸಿದ್ದಾರೆ.

ಸರ್ಜಾಪುರದ ಚಿಕ್ಕದಾಸರಹಳ್ಳಿಯ ಲಕ್ಷ್ಮಣ್ (38) ಬಂಧಿತ ಆರೋಪಿ. ಬಂಧಿತನಿಂದ ಎಂಟು ಲಕ್ಷ ಮೌಲ್ಯದ ಕಳ್ಳತನ ಒಡವೆಗಳನ್ನು ವಶಪಡಿಸಿಕೊಂಡಿದ್ದಾರೆ. ವಾಬಸಂದ್ರದ ಗೋಪಾಲಸ್ವಾಮಿ ಎಂಬುವರ ಮನೆಬಾಗಿಲು ಮುರಿದು 7,25,000 ಬೆಲೆಬಾಳುವ ಚಿನ್ನಾಭರಣ ಕಳ್ಳತನ ಮಾಡಿದ್ದ. ಜಿಗಣಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ದೂರಿನ ಮೇರೆಗೆ ಪೊಲೀಸರು ಕಾರ್ಯಾಚರಣೆ ಕೈಗೊಂಡು ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಆರೋಪಿ ವಿರುದ್ಧ ಸೂರ್ಯನಗರ, ಅತ್ತಿಬೆಲೆ, ಜಿಗಣಿ ಸೇರಿದಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 23 ಪ್ರಕರಣಗಳಲ್ಲಿ ಬೇಕಾಗಿದ್ದ. ತನ್ನ ಪ್ರೇಯಸಿಯ ವಿಲಾಸಿ ಜೀವನ ತೃಪ್ತಿಪಡಿಸಲು ಕಳ್ಳತನ ಮಾಡುತ್ತಿರುವುದಾಗಿ ಆರೋಪಿ ಪೊಲೀಸರ ವಿಚಾರಣೆ ವೇಳೆ ಹೇಳಿದ್ದಾನೆ.

ಅಪರಾಧ ಸುದ್ದಿ

### ವ್ಯಕ್ತಿಯ ಮೇಲೆ ಹಲ್ಲೆ

**ಕೆ.ಆರ್.ಪುರ:** ವಿಜನಾಪುರದ ಅಹ್ಲೆ ಸುನ್ನತ್ ಜಮಾತ್ ಜಾಮಿಯಾ ಮಸೀದಿಗೆ ಮುಂಜಾನೆ ಸಮಯ ಪ್ರಾರ್ಥನೆಗೆಂದು ಆಗಮಿಸಿದ ವ್ಯಕ್ತಿಯ ಮೇಲೆ ಹಲ್ಲೆ ಮಾಡಿರುವಂತಹ ಘಟನೆ ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಜರುಗಿದೆ.

ನ್ಯಾಯ ಪಂಚಾಯಿತಿ ವಿಚಾರದಲ್ಲಿ ಮತ್ತೊಂದು ಮಸೀದಿಗೆ ರಿಯಾಜ್ ಖಾನ್ (58) ಎಂಬುವರು ಹೋಗಿದ್ದಕ್ಕೆ ಹಿಡಿದು ಥಳಿಸುವುದಲ್ಲದೆ ನಿಂದಿಸಿ ಕೊಲೆ ಬೆದರಿಕೆ ಕೂಡ ಹಾಕಲಾಗಿದೆ. ಮಸೀದ್ ಅಧ್ಯಕ್ಷ ಸೈಯದ್ ಆಯುಬ್ ಪ್ರಾರ್ಥನೆಗೆ ಬಂದ ಈ ವ್ಯಕ್ತಿಯ ಮೇಲೆ ಹಲ್ಲೆ ಮಾಡಿರುವುದು ತಿಳಿದುಬಂದಿದೆ.

**ಘಟನೆ ವಿವರ:** ಇತ್ತೀಚಿನ ತಮ್ಮ ಕೌಟುಂಬಿಕ ಕಲಹದ ಹಿನ್ನೆಲೆ ಜಮೀಯಾ ಮಸೀದಿಗೆ ಹೋಗಿದ್ದ ರಿಯಾಜ್ ಕುಟುಂಬ, ಮಸೀದಿಯಲ್ಲಿ ನ್ಯಾಯ ಪಂಚಾಯತಿ ಮಾಡಿದರು ಸಮಸ್ಯೆ ಬಗೆಹರಿಸಲು ಸಾಧ್ಯವಾಗಿರಲಿಲ್ಲ. ಬಳಿಕ ರಿಯಾಜ್ ಮತ್ತೊಂದು ಮಸೀದಿಗೆ ಹೋಗಿದ್ದಕ್ಕೆ ಕೋಪಗೊಂಡು ಹಲ್ಲೆ ಮಾಡಿ ಕೊಲೆ ಬೆದರಿಕೆಯನ್ನು ಹಾಕಿದ್ದಾರೆ. ರಿಯಾಜ್ ಕುಟುಂಬಕ್ಕೆ ಜಾಮಿಯಾ ಮಸೀದಿಯಾ ಆಡಳಿತ ಮಂಡಳಿ ಅರೇಬಿಯಾ ಭಾಷೆಯಲ್ಲಿ ನೋಟಿಸ್ ಜಾರಿ ಮಾಡಿದ್ದು, ನಿಮ್ಮ ಕುಟುಂಬದಲ್ಲಿ ಯಾರಾದರೂ ದೈವಧೀನರಾದರೆ ಸ್ಮಶಾನ ಜಾಗ, ಶುಭಾ ಸಮಾರಂಭಗಳಿಗೆ ಮಸೀದಿ ಅವಕಾಶ ನೀಡಲಾಗುವುದಿಲ್ಲ ಎಂದು ನೋಟಿಸ್ ಕೂಡ ನೀಡಿದ್ದಾರೆ ಎಂಬುದು ತಿಳಿದುಬಂದಿದೆ.

### ಮಹಿಳೆಗೆ ಕಪಾಳಮೋಕ್ಷ–ಬಂಧನ

ಆಟೊ, ಕ್ಯಾಬ್ ಚಾಲಕರು ಮತ್ತು ಸವಾರರ ನಡುವೆ ಆಗಾಗ್ಗೆ ಸಣ್ಣಪುಟ್ಟ ಜಗಳ, ವಾಗ್ವಾದಗಳು ಸಾಮಾನ್ಯವಾಗಿರುತ್ತವೆ. ಆದರೆ, ಬುಕ್ ಮಾಡಿ ನಂತರ ರದ್ದು ಮಾಡಿದ್ದಕ್ಕೆ ಸಿಟ್ಟಿಗೆದ್ದ ಆಟೋ ಚಾಲಕನೋರ್ವ ಮಹಿಳೆಗೆ ಕಪಾಳಮೋಕ್ಷ ಮಾಡಿರುವ ವಿಡಿಯೋ ವೈರಲ್ ಆಗಿದೆ. ನಿತಿ ಎನ್ನುವ ಮಹಿಳೆ ಈ ಬಗ್ಗೆ ವಿಡಿಯೊ ಹಂಚಿಕೊಂಡಿದ್ದು ಸದ್ಯ ವೈರಲ್ ಆಗಿದೆ. ನಿತಿ ಮತ್ತು ಆಕೆಯ ಸ್ನೇಹಿತೆ ಇಬ್ಬರೂ ಕೂಡ ಓಲಾ ಅಪ್ಲಿಕೇಷನ್‌ನಲ್ಲಿ ಎರಡು ಆಟೊ ಬುಕ್ ಮಾಡಿದ್ದರು. ನಿತಿ ಬುಕ್ ಮಾಡಿದ್ದ ಆಟೊ ಮೊದಲು ಬಂದ ಕಾರಣ, ಆಕೆಯ ಸ್ನೇಹಿತೆ ತಾನು ಆಟೊ ಬುಕ್ ಮಾಡಿದ್ದು ರದ್ದು ಮಾಡಿ, ಸ್ನೇಹಿತೆ ಜೊತೆ ಆಟೊ ಹತ್ತಿದ್ದಾರೆ.

ಬುಕಿಂಗ್ ಕ್ಯಾನ್ಸಲ್ ಮಾಡಿದ್ದಕ್ಕೆ ಸಿಟ್ಟಾದ ಆಟೋ ಚಾಲಕ, ಆಕೆಯನ್ನು ಹಿಂಬಾಲಿಸಿಕೊಂಡು ಬಂದು ಜಗಳ ಮಾಡಿದ್ದಾರೆ. ನಿತಿ ತಮ್ಮ ಎಕ್ಸ್ ಖಾತೆಯಲ್ಲಿ ಜಗಳದ ವಿಡಿಯೋ ಹಂಚಿಕೊಂಡಿದ್ದಾರೆ.

ವಿಡಿಯೋದಲ್ಲಿ ಚಾಲಕ ಕೋಪಗೊಂಡು ಮಹಿಳೆಯರಿಗೆ ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾನೆ. ಬುಕಿಂಗ್ ಕ್ಯಾನ್ಸಲ್ ಯಾಕೆ ಮಾಡಿದ್ರಿ, ಗ್ಯಾಸ್ ದುಡ್ಡು ಏನು ನಿಮ್ಮಪ್ಪ ಕೊಡ್ತಾನಾ ಎಂದು ಆಟೊ ಚಾಲಕ ಮಹಿಳೆಯರಿಗೆ ನಿಂದಿಸಿದ್ದಾನೆ. ಆಟೋ ಚಾಲಕ ಬೈಯುತ್ತಿರುವಾಗಲೇ ಆ ಮಹಿಳೆ ನನಗೆ ಯಾಕೆ ಕಪಾಳಕ್ಕೆ ಹೊಡೆದಿರಿ ಎಂದು ಪ್ರಶ್ನೆ ಮಾಡಿದ್ದಾರೆ.

ಇಷ್ಟಕ್ಕೆ ಆಟೊ ಚಾಲಕ ಸುಮ್ಮನಾಗದೆ, ನಿತಿಗೆ ಚಪ್ಪಲಿಯಿಂದ ಥಳಿಸುವುದಾಗಿ ಬೆದರಿಕೆಯೊಡ್ಡಿದ್ದಾನೆ. ನಿತಿ ಹತ್ತಿದ್ದ ಆಟೊ ಚಾಲಕ ಸಂಧಾನಕ್ಕೆ ಪ್ರಯತ್ನ ಮಾಡಿದರೂ, ಪರಿಸ್ಥಿತಿ ಸುಧಾರಣೆಯಾಗಲಿಲ್ಲ. ಬಳಿಕ ಮಹಿಳೆ ಆಟೊ ಚಾಲಕನಿಗೆ ಪೊಲೀಸ್ ಸ್ಟೇಷನ್‌ಗೆ ಹೋಗೋಣ ಎಂದು ಕರೆದರು, ಆಟೋ ಚಾಲಕ ಬನ್ನಿ ಹೋಗೋಣ ಎಂದರು. ಅಲ್ಲದೆ ಅಶ್ಲೀಲವಾಗಿ ನಿಂದಿಸುವುದನ್ನು ಕೂಡ ವಿಡಿಯೋದಲ್ಲಿ ನೋಡಬಹುದು. ಇತ್ತ ಪೊಲೀಸರು ಆಟೊ ಚಾಲಕನನ್ನು ಬಂಧಿಸಿದ್ದಾರೆ.